**<u>3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>**

**<u>S.C.11/2022</u>**

ದಿಃ 24.02.2026
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

**Cw-4 Pw-2**

| | | |
|---|---|---|
| ಹೆಸರು | ಃ | ಸುಶಾಂತ್ ಕುಮಾರ್ ಬೆಹರಾ |
| ತಂದೆಯ ಹೆಸರು | ಃ | ಮಯದಾರ್ ಬೆಹರಾ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | Machine operator, PVC Company |
| ವಾಸಸ್ಥಳ | ಃ | ಓಡಿಸ್ಸಾ |

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

1. ನಾನು 2021 ರಲ್ಲಿ Shree Krishna Industries ನಲ್ಲಿ ಮೆಷಿನ್ ಆಪರೇಟರ್ ಆಗಿ ಕೆಲಸ ಮಾಡಿಕೊಂಡಿದ್ದೆ. ಸದರಿ Industries ತಾವರೆಕೆರೆ ಕೆಂಗೇರಿ ಮುಖ್ಯ ರಸ್ತೆ, ಚಿಕ್ಕಣ್ಣನ ಪಾಳ್ಯ ಗ್ರಾಮದಲ್ಲಿ ಇದೆ. ಅಂಕುರ್ ಮುರಾ, ಜೋತಿದಾಸ್, ಲಂಕೇಶ್ ಶರ್ಮಾ, ಬಿಕಾಸ್ ರಾಯ್, ಮಹೇಶ್ ಷಾ, ಮನೀಸ್ ಸಿಂಗ್ ನಾವೆಲ್ಲಾ ಜೊತೆಯಲ್ಲಿ Krishna Industries ನಲ್ಲಿ ಕೆಲಸ ಮಾಡುತ್ತಿದ್ದೆವು. ಅಂಕುರ್ ಮುರಾ ಮತ್ತು ಮನೀಸ್ ಸಿಂಗ್ ದಿಃ 12.09.2021 ರಂದು ರಾತ್ರಿ ಸುಮಾರು 10.30 ರ ಸಮಯದಲ್ಲಿ ಕಂಪನಿಯ ಗೇಟ್ ನ ಬಳಿ ಇರುವಂತಹ ರಸ್ತೆಯಲ್ಲಿ ಅಂಕುರ್ ಮುರಾ ಮತ್ತು ಮನೀಸ್ ಸಿಂಗ್ ಕುಳಿತು ಮೊಬೈಲ್ ನಲ್ಲಿ ಮಾತನಾಡುತ್ತಿದ್ದರು. ಆ ಸಮಯದಲ್ಲಿ 4 ಜನ ದ್ವಿಚಕ್ರ ವಾಹನದಲ್ಲಿ ಅಂದರೆ ಸ್ಕೂಟಿ ವಾಹನದಲ್ಲಿ ಬಂದು ಮನೀಸ್ ಸಿಂಗ್ ಮತ್ತು ಅಂಕುರ್ ಮುರಾ ಬಳಿ ವಿಳಾಸ ಕೇಳುತ್ತಿದ್ದರು, ಆಗ ನಾನು ಸುಮಾರು 20 ಅಡಿ

ದೂರದಲ್ಲಿ ಇದ್ದೆ. ಅಂಕುರ್ ಮುರಾ ತನಗೆ ಈ ವಿಳಾಸ ಗೊತ್ತಿಲ್ಲ ಎಂದು ಕೇಳುತ್ತಿದ್ದ. ಸ್ಕೂಟರ್ ನಲ್ಲಿ ಬಂದತಹ 4 ಜನರ ಪೈಕಿ 3 ಜನ ಅಂಕುರ್ ಮುರಾ ಮತ್ತು ಮನೀಸ್ ಸಿಂಗ್ ನ ಬಳಿ ವಿಳಾಸ ಕೇಳುತ್ತಿದ್ದರು. ಅವರ ನಡುವೆ ಸ್ವಲ್ಪ ಮಾತುಕತೆ ನಡೆದಿದ್ದು, ಆಗ ಒಬ್ಬ ವ್ಯಕ್ತಿ ಅಂಕುರ್ ಮುರಾ ನ ತಲೆಗೆ ಚಾಕುವಿನಿಂದ ಹೊಡೆದ. ಅಲ್ಲೇ ಇದ್ದಂತಹ ಮನೀಸ್ ಸಿಂಗ್ ಅಂಕುರ್ ನ ಬಳಿ ಬಂದು ಏನಕ್ಕೆ ಹೊಡೆಯುತ್ತಿದ್ದೀರಿ ಎಂದು ಕೇಳಿದಾಗ ಮನೀಸ್ ಸಿಂಗ್ ನ ಹೊಟ್ಟೆಗೆ ದೊಡ್ಡದೊಂದು ಚಾಕುವಿನಿಂದ ತಿವಿದರು. ಮನೀಸ್ ಸಿಂಗ್ ಗೆ ಗಾಯವಾಗಿದ್ದ ಕಾರಣ ಆತ ಕೆಳಗೆ ಬಿದ್ದ. ಆಗ ನಾವೆಲ್ಲರೂ ಸಹ ಮನೀಸ್ ಇದ್ದಂತಹ ಜಾಗಕ್ಕೆ ಓಡಿ ಬಂದೆವು. ಅಂದರೆ ನಾನು ಜೋತಿದಾಸ್, ಬಿಕಾಸ್ ರಾಯ್, ಲಂಕೇಶ್ ಶರ್ಮಾ, ಮಹೇಶ್ ಷಾ ಸದರಿ ಸ್ಥಳಕ್ಕೆ ಓಡಿ ಬಂದೆವು. ಅಲ್ಲಿಗೆ ಬಂದಂತಹ ನಮಗೆಲ್ಲರಿಗೂ ಸಹ ಸದರಿ ವ್ಯಕ್ತಿಗಳು ಚಾಕುವಿನಿಂದ ಹಲ್ಲೆ ಮಾಡಲು ಪ್ರಾರಂಭಿಸಿದರು. ನನ್ನ ತಲೆಯ ಬಲಭಾಗಕ್ಕೆ ಏಟಾಗಿರುತ್ತದೆ. ಕೆಲವರಿಗೆ ಕೈಗೆ ಏಟಾಯಿತು, ಕೆಲವರಿಗೆ ತಲೆಗೆ ಹಾಗೂ ಕೆಲವರಿಗೆ ಹೊಟ್ಟೆಗೆ ಏಟಾಯಿತು. ಅಷ್ಟು ಹೊತ್ತಿಗೆ ನಮ್ಮ ಕಂಪನಿಯ ಇನ್ನೂ ಕೆಲವು ವ್ಯಕ್ತಿಗಳು ಸ್ಥಳಕ್ಕೆ ಬಂದಿದ್ದನ್ನು ನೋಡಿ ದ್ವಿಚಕ್ರ ವಾಹನದಲ್ಲಿ ಬಂದಂತಹ ವ್ಯಕ್ತಿಗಳು ಓಡಿ ಹೋದರು. ನಂತರ ಈ ವಿಚಾರವನ್ನು ಮೊದಲು ನಮ್ಮ ಕಂಪನಿಯ ಓನರಿಗೆ ತಿಳಿಸಿದೆವು. ಮಾಲೀಕರು ಒಂದು ಕಾರನ್ನು ಸ್ಥಳಕ್ಕೆ ಕಳುಹಿಸಿದ್ದು, ಕಾರಿನಲ್ಲಿ ಲಂಕೇಶ್ ಶರ್ಮಾ, ಅಂಕುರ್ ಮುರಾ ಮತ್ತು ಮನೀಸ್ ಸಿಂಗ್ ಆಸ್ಪತ್ರೆಗೆ ಹೋದರು. ನಾವು ತಾವರೆಕೆರೆಯ

ಅಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋದೆವು. ಅಂದು ರಾತ್ರಿ ಸುಮಾರು 12.30 ರ ನಂತರ ಮನೀಸ್ ಸಿಂಗ್ ಮರಣ ಹೊಂದಿದ ಎಂದು ತಿಳಿಯಿತು.

2. ಆಸ್ಪತ್ರೆಯಿಂದ ಮಾರನೇ ದಿನ ನಾನು ಬಂದಿರುತ್ತೇನೆ. ಆಸ್ಪತ್ರೆಯಿಂದ ಬಂದ ನಂತರ ನಾವುಗಳು ತಾವರೆಕೆರೆ ಪೊಲೀಸ್ ಠಾಣೆಗೆ ಹೋದೆವು. ಪೊಲೀಸರು ನಮ್ಮನ್ನು ವಿಚಾರಣೆ ಮಾಡಿದ್ದು ಆಗ ಘಟನೆಯ ಬಗ್ಗೆ ಎಲ್ಲಾ ವಿಚಾರವನ್ನು ಹೇಳಿರುತ್ತೇವೆ. ನನ್ನೊಂದಿಗೆ ಗಾಯಗೊಂಡಂತಹ ಇತರೆ ನನ್ನ ಸಹೋದ್ಯೋಗಿಗಳಿಗೆ ಕನ್ನಡ ಬಾರದೇ ಇದ್ದು ನನಗೆ ಸ್ವಲ್ಪ ಕನ್ನಡ ಬರುತ್ತಿದ್ದ ಕಾರಣ ಅವರು ಹೇಳಿದ್ದನ್ನು ನಾನು ಪೊಲೀಸರಿಗೆ ಕನ್ನಡದಲ್ಲಿ ಹೇಳಿರುತ್ತೇನೆ. ಪೋಲೀಸರಿಗೆ ಹೇಳಿಕೆ ಕೊಟ್ಟ ನಂತರ ದಿಃ 13.09.2021 ರಂದು ಪೊಲೀಸರು ನಮಗೆ 4 ಜನ ಆರೋಪಿಗಳನ್ನು ತೋರಿಸಿದ್ದು ಅವರನ್ನು ನಾವು ಗುರುತಿಸಿರುತ್ತೇವೆ. ಅಂದು ಪೋಲೀಸ್ ಠಾಣೆಯಲ್ಲಿ ನೋಡಿದಂತಹ 4 ಜನ ಆರೋಪಿಗಳು ಇಂದು ನ್ಯಾಯಾಲಯದಲ್ಲಿ ಇರುತ್ತಾರೆ ಪೊಲೀಸರು 2 ದ್ವಿಚಕ್ರ ವಾಹನವನ್ನು ತೋರಿಸಿದ್ದು ಅದನ್ನು ನೋಡಿ ಗುರುತಿಸಿರುತ್ತೇವೆ.

3. ನಂತರ ನಾವು ಉಳಿದುಕೊಂಡಂತಹ ಜಾಗಕ್ಕೆ ಬಂದು ಬಟ್ಟೆಯನ್ನು ಬದಲಾಯಿಸಿ ರಕ್ತದ ಕಲೆಯಾಗಿದ್ದಂತಹ ಬಟ್ಟೆಯನ್ನು ಪೊಲೀಸರಿಗೆ ತಂದು ಕೊಟ್ಟಿರುತ್ತೇವೆ. ವಾಹನ ಪೋಲೀಸ್ ಠಾಣೆಯಲ್ಲಿ ಇದ್ದು ನಾನು ಕೊಟ್ಟಂತಹ ರಕ್ತದ ಕಲೆಯಾಗಿದ್ದಂತಹ ವಸ್ತ್ರಗಳನ್ನು ಪೋಲೀಸರು ಅದರ ಮೇಲೆ ಟ್ಯಾಗ್ ಮಾಡಿ ಬರೆದುಕೊಂಡು ಅದನ್ನು ಪಡೆದುಕೊಂಡಿರುತ್ತಾರೆ. ಸದರಿ ಬರವಣಿಗೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ದಿಃ 13.09.2021 ರ ಪಂಚನಾಮೆಯಲ್ಲಿ ಇರುವಂತಹ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚಾನಾಮೆಯನ್ನು **ನಿಪಿ 3 ಹಾಗೂ**

**ಸಾಕ್ಷಿಯ ಸಹಿಯನ್ನು ನಿ ಪಿ 3 (ಎ) ಎಂದು ಗುರುತಿಸಲಾಯಿತು.** ನಾನು ಕೊಟ್ಟಂತಹ ನನ್ನ ಬಟ್ಟೆ ನೀಲಿ ಬಣ್ಣದ ಟೀ ಶರ್ಟ್ ಆಗಿತ್ತು. ಮೊಹರು ಮಾಡಿದಂತಹ ಬಟ್ಟೆ ಪೊಟ್ಟಣ ನ್ಯಾಯಾಲಯದ ಮುಂದೆ ಇದ್ದು ಅದನ್ನು ತೆರೆದ ನ್ಯಾಯಾಲಯದಲ್ಲಿ ಒಡೆದು ನೋಡಲಾಗಿ, ಅದರಲ್ಲಿ ಸಾಕ್ಷಿ ಗುರುತಿಸಿರುವ ನೀಲಿ ಬಣ್ಣದ ಟೀ ಶರ್ಟನ್ನು **ಮುಮಾ1 ಎಂದು ಗುರುತಿಸಲಾಯಿತು.** ದ್ವಿಚಕ್ರ ವಾಹನದ ನೊಂದಣಿ ಸಂಖ್ಯೆ ನಾನೀಗ ಮರೆತಿರುತ್ತೇನೆ. ಅದು ಕಪ್ಪು ಬಣ್ಣದ ಆ್ಯಕ್ಟಿವಾ ಮತ್ತು ಇನ್ನೊಂದು ದ್ವಿಚಕ್ರ ವಾಹನವಾಗಿತ್ತು. ಸಾಕ್ಷಿ 2 ದ್ವಿಚಕ್ರ ವಾಹನ ಇರುವಂತಹ ಪೋಟೋವನ್ನು ನೋಡಿ ವಾಹನವನ್ನು ಗುರುತಿಸಿದ್ದು **ಸದರಿ ಪೋಟೋವನ್ನು ನಿಪಿ 4 ಎಂದು ಗುರುತಿಸಲಾಯಿತು.**

4. ನಾನು ಪೋಲೀಸ್ ಠಾಣೆಗೆ ಬಂದಾಗ ಆರೋಪಿತರಲ್ಲಿ ಕಿರಣ್, ಕಿಶೋರ್, ಸುನೀಲ್ ಎಂದು ತಿಳಿಯಿತು. ಇನ್ನೊಬ್ಬನ ಹೆಸರು ನನಗೆ ಗೊತ್ತಿಲ್ಲ. ದಿಃ 27.10.2021 ರಂದು ರಾಮನಗರ ಜೈಲಿಗೆ ಹೋಗಿದ್ದೆ. ಅಲ್ಲಿ ತಹಶೀಲ್ದಾರ್ ಮತ್ತು ಪೊಲೀಸರು ಇದ್ದರು. ಅಲ್ಲಿ ಬೇರೆ ಬೇರೆ ವ್ಯಕಿಗಳನ್ನು ನಿಲ್ಲಿಸಿದ್ದು, ಅವರ ಮದ್ಯ ಮದ್ಯದಲ್ಲಿ ಆರೋಪಿಗಳನ್ನು ಸಹ ನಿಲ್ಲಿಸಿದ್ದು, ಆರೋಪಿಗಳನ್ನು ನಾನು ಗುರುತಿಸಿರುತ್ತೇನೆ. ಅಂದು ನಾನು ಜೈಲಿನಲ್ಲಿ ನೋಡಿದಂತಹ ವ್ಯಕ್ತಿಗಳು ಇಂದು ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಗಳು ಆಗಿರುತ್ತಾರೆ. ಘಟನೆ ನಡೆದ ದಿನ ನೋಡಿದಂತಹ ವ್ಯಕ್ತಿಗಳು, ಪೊಲೀಸ್ ಠಾಣೆಯಲ್ಲಿ ನೋಡಿದಂತಹ ವ್ಯಕ್ತಿಗಳು ಮತ್ತು ಜೈಲಿನಲ್ಲಿ ನೋಡಿದಂತಹ ವ್ಯಕ್ತಿಗಳು ಇಂದು ನ್ಯಾಯಾಲಯದ ಮುಂದೆ ಇರುವವ ವ್ಯಕ್ತಿಗಳೇ ಆಗಿರುತ್ತಾರೆ.

5. ದಿಃ 13.09.2021 ರಂದು ಮಹಜರು ಕ್ರಮ ಜರುಗಿಸಿದಾಗ ಬೆಳಿಗ್ಗೆ 10.30 ರ ಸಮಯವಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರು ನನ್ನ ವಿಚಾರಣೆ ಮಾಡಿದ್ದು ನಾನು ಹೇಳಿಕೆ ನೀಡಿರುತ್ತೇನೆ. ಘಟನೆ ನಡೆದಿರುವುದನ್ನು ಹಾಗೂ ಅಲ್ಲಿ ಬಂದಿದ್ದಂತಹ ಆರೋಪಿಗಳನ್ನು ರಸ್ತೆಯ ವಿದ್ಯುತ್ ದೀಪದ ಮೂಲಕ ಹಾಗೂ ನಮ್ಮ ಕಂಪನಿಯ ದೀಪಗಳ ಮೂಲಕ ನೋಡಿರುತ್ತೇನೆ. ನಾನು ನನ್ನ ಸ್ನೇಹಿತರು ನಿಂತಿದ್ದ ಜಾಗಕ್ಕೂ ಅಂಕುರ್ ಮುರಾ ಮತ್ತು ಮನೀಸ್ ಸಿಂಗ್ ಜಾಗಕ್ಕೂ ಸುಮಾರು 15 – 20 ಮೀಟರ್ ಅಂತರ ಇತ್ತು. ಅಲ್ಲಿ ದ್ವಿಚಕ್ರ ವಹಾನದಲ್ಲಿ ಬಂದಂತಹ ವ್ಯಕ್ತಿಗಳು ಅಡ್ರಸನ್ನೇ ಕೇಳುತ್ತಿದ್ದರು ಎಂಬುದು ಅವರು ಮಾತನಾಡುವುದು ಕೇಳಿಸಿರುವ ಕಾರಣ ಅದು ನನಗೆ ತಿಳಿದಿರುತ್ತದೆ. ದ್ವಿಚಕ್ರ ವಾಹನದಲ್ಲಿ ಬಂದಂತಹ ವ್ಯಕ್ತಿಗಳು ಅಂಕುರ್ ಮುರಾ ಮತ್ತು ಮನೀಸ್ ಸಿಂಗ್ ನಿಂದ ಹಣ ಮತ್ತು ಮೊಬೈಲನ್ನು ಕಿತ್ತುಕೊಳ್ಳಲು ಪ್ರಯತ್ನಿಸಿರುತ್ತಾರೆ.

**ಈಗ ಮದ್ಯಾಹ್ನ ವಿರಾಮದ ವೇಳೆಯಾಗಿದ್ದು ಮುಖ್ಯ ವಿಚಾರಣೆಯು 2.10 ಕ್ಕೆ ಮುಗಿದಿದ್ದು ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಯು ಹೊರರಾಜ್ಯದಿಂದ ಬಂದಿರುವ ಕಾರಣ ಪಾಟೀ ಸವಾಲಿಗಾಗಿ ಮದ್ಯಾಹ್ನಕ್ಕೆ ಕಾದಿರಿಸಲಾಯಿತು.**

**(ಸಾಕ್ಷಿಗೆ ಪುನಃ ಮದ್ಯಾಹ್ನ ಪ್ರಮಾಣ ವಚನವನ್ನು ಬೋಧಿಸಲಾಯಿತು)**

<u>ಪಾಟೀ ಸವಾಲುಃ ಶ್ರೀ. ಟಿ.ಜಿ., ವಕೀಲರಿಂದ ಆರೋಪಿತರ ಪರವಾಗಿಃ</u>

6. 2007 ರಿಂದ 2012 ರವರೆಗೆ ನಾನು ಕರ್ನಾಟಕದಲ್ಲಿ ಅಂದರೆ ಬೆಂಗಳೂರಿನಲ್ಲಿ ಇದ್ದೆ ಮದ್ಯದಲ್ಲಿ 4 ವರ್ಷಗಳ ಕಾಲ ಕರ್ನಾಟಕದಲ್ಲಿ ಇರಲಿಲ್ಲ ನಂತರ ಪುನಃ 2017 ರಲ್ಲಿ ಮತ್ತೆ ಬೆಂಗಳೂರಿಗೆ ಬಂದು ಚಿಕ್ಕಣ್ಣನಪಾಳ್ಯದ Krishna Industries ತಾವರೆಕೆರೆ ಯಲ್ಲಿ ಮಾರ್ಚ್ 2025 ರವರೆಗೆ

ವಾಸ ಮಾಡುತ್ತಿದ್ದೆ. 2017 ರಿಂದ 2025 ಮಾರ್ಚ್ ರವರೆಗೆ ನಾನು Krishna Industries ನಲ್ಲಿ ಕೆಲಸ ಮಾಡುತ್ತಿದ್ದೆ. ಅಲ್ಲಿ ನಾನು ಮೆಷಿನ್ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದೆ. Krishna Industries ಅಲ್ಲಿ ಆವಾಗ 30-40 ಜನ ಕೆಲಸಗಾರುರು ಇದ್ದರು. Krishna Industries ನ ಅಕ್ಕಪಕ್ಕದಲ್ಲಿ ಬೇರೆ ಫ್ಯಾಕ್ಟರಿಗಳು ಇಲ್ಲ, ಆದರೆ Krishna Industries ನ ಹಿಂದೆ ಇನ್ನೊಂದು ಫ್ಯಾಕ್ಟರಿ ಇದೆ. Krishna Industries ನಲ್ಲಿ ಹೆಚ್ಚಾಗಿ ಹೊರ ರಾಜ್ಯದ ಜನರು ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ಅಸ್ಸಾಂ, ಬಿಹಾರ್, ಒರಿಸ್ಸಾ, ನಾಗಾಲ್ಯಾಂಡ್ ರಾಜ್ಯದವರೆಲ್ಲಾ ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿ ಒರಿಸ್ಸಾದವ ನಾನೊಬ್ಬನೇ ಇದ್ದು ಅಸ್ಸಾಂ ಮತ್ತು ಬಿಹಾರ್ ರಾಜ್ಯದ ಕೆಲಸಗಾರರು ಇದ್ದರು.

7. ಅಸ್ಸಾಂನ ಜನರು ಅಸ್ಸಾಂದ ಭಾಷೆಯಲ್ಲಿ ಬಿಹಾರಿ ಜನರು ಬಿಹಾರಿನ ಆಡುಭಾಷೆಯಲ್ಲಿ ಮತ್ತು ಒರಿಸ್ಸಾದವರು ಒರಿಸ್ಸಾದ ಭಾಷೆಯಲ್ಲಿ ಮಾತನಾಡುತ್ತಿದ್ದರು ಎಂದರೆ ಸಾಕ್ಷಿ ಅವರವರು ಅವರವರ ರಾಜ್ಯದ ಭಾಷೆಯಲ್ಲಿ ಮಾತನಾಡಿಕೊಳ್ಳುತ್ತಿದ್ದು, ಆದರೆ ನಾವೆಲ್ಲರೂ ಸೇರಿದಾಗ ಹಿಂದಿಯಲ್ಲಿ ಮಾತನಾಡುತ್ತಿದ್ದೆವು ಎಂದು ನುಡಿಯುತ್ತಾರೆ. ನನ್ನ ವಿಳಾಸದಲ್ಲಿ ನಾನು ಬಿಹಾರ್ ಬರೆಸಿಲ್ಲ ಎಂದರೆ ಸಾಕ್ಷಿ ನಾನು ಬಿಹಾರಿನಲ್ಲಿ ಇಲ್ಲ ಎಂದು ಉತ್ತರಿಸಿರುತ್ತಾರೆ.

8. Krishna Industries ನಲ್ಲಿ ಪ್ಲಾಸ್ಟಿಕ್ ಬಾಗಿಲುಗಳನ್ನು ತಯಾರಿಸುತ್ತಿದ್ದು ಆದರೆ ಫ್ಯಾಬ್ರಿಕೇಷನ್ ಕೆಲಸ ನಡೆಯುತ್ತಿರಲಿಲ್ಲ. ಸದರಿ ಫ್ಯಾಕ್ಟರಿಯಿಂದ ಸಾಮಗ್ರಿಗಳನ್ನು ತುಂಬಿಕೊಂಡು ಬೇರೆ ಬೇರೆ ಕಡೆಗೆ ಸಾಗಿಸುತ್ತಾರೆ ಎಂದರೆ ಸರಿ. ನಮ್ಮ ಫ್ಯಾಕ್ಟರಿಯ ಸುತ್ತಾ ಕಾಂಪೌಂಡ್ ಗೋಡೆ ಇದೆ ಎಂದರೆ ಸಾಕ್ಷಿ 3 ಕಡೆ ಇದೆ ಮುಂದೆ ಇಲ್ಲ , ಆದರೆ ಈಗ ಮಾಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. Krishna Industries ನ ಒಳಗೆ ಪ್ರವೇಶಕ್ಕೆ ಸೆಕ್ಯೂರಿಟಿ ಗಾರ್ಡ್ ಇದ್ದರು ಎಂದರೆ ಸಾಕ್ಷಿ, ಆ ದಿನ ಇರಲಿಲ್ಲ ಎಂದು ಉತ್ತರಿಸಿರುತ್ತಾರೆ. ಸಾಮಾನ್ಯವಾಗಿ ಫ್ಯಾಕ್ಟರಿಗಳಲ್ಲಿ ವಾಚ್ ಮನ್ ಇರುತ್ತಾರೆ ಎಂದರೆ ಸರಿ. ನಮ್ಮ ಫ್ಯಾಕ್ಟರಿಯಲ್ಲಿ ಲಕ್ಷಾಂತರ ರೂಪಾಯಿಯ ವಸ್ತುಗಳನ್ನು ತಯಾರು ಮಾಡಲಾಗುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಸಿ ಸಿ ಟಿ ವಿ ಕ್ಯಾಮೆರಾ ಅಳವಡಿಸಿರುತ್ತಾರೆ ಎಂದೆರ ಸಾಕ್ಷಿ 2021 ನೇ ಸಾಲಿನಲ್ಲಿ ಸಿ ಸಿ ಟಿ ವಿ ಕ್ಯಾಮೆರಾ

ಇರಲಿಲ್ಲ, 2024 ರ ನಂತರ ಸಿ ಸಿ ಟಿ ವಿ ಕ್ಯಾಮೆರಾ ಅಳವಡಿಸಿರುತ್ತಾರೆ. ಫ್ಯಾಕ್ಟರಿ ಪ್ರಾರಂಭವಾದಾಗಿನಿಂದ ಸಿ ಸಿ ಟಿ ವಿ ಕ್ಯಾಮೆರಾ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಪ್ರತಿ ಭಾನುವಾರ ಫ್ಯಾಕ್ಟರಿಯ ವಾರದ ರಜೆ ಎಂದರೆ ಸರಿ. ಸಾಕ್ಷಿ ಸ್ವಯ ಹೇಳುತ್ತಾರೆ ಆದರೆ ನಾವುಗಳು ಕೆಲವೊಮ್ಮೆ ಭಾನುವಾರ ಓಟಿ ಮಾಡಿ ಬೇರೆ ದಿನ ರಜೆ ತೆಗೆದುಕೊಳ್ಳುತ್ತೇವೆ. ಸಾಮಾನ್ಯವಾಗಿ ಫ್ಯಾಕ್ಟರಿಯ ನೌಕರರು ಭಾನುವಾರ ರಜೆ ಪಡೆದು ಅವರ ವೈಯಕ್ತಿಕ ಕೆಲಸಗಳನ್ನು ಮಾಡಿಕೊಳ್ಳುತ್ತಾರೆ ಎಂದರೆ ಸಾಕ್ಷಿ ಹಾಗೇನೂ ಇಲ್ಲ, ಭಾನುವಾರ ರಜೆ ತೆಗೆದುಕೊಂಡರೆ ನಮ್ಮ ಬ್ಯಾಂಕಿನ ಕೆಲಸ ಅಥವಾ ಬೇರೆ ಕಛೇರಿಯ ಕೆಲಸ ಅಥವಾ ಆಸ್ಪತ್ರೆಗೆ ಹೋಗಬೇಕಿದ್ದಲ್ಲಿ ವಾರದ ಬೇರೆ ದಿನದಲ್ಲೇ ರಜೆಯನ್ನು ಉಪಯೋಗಿಸಬೇಕಾಗುತ್ತದೆ ಎಂದು ಉತ್ತರಿಸಿರುತ್ತಾರೆ.

9. ನನಗೆ ಹಿಂದಿ ಮತ್ತು ಬಂಗಾಳಿ ಭಾಷೆ ಬರುವಂತೆ ಕನ್ನಡ ಭಾಷೆ ನಿರರ್ಗಳವಾಗಿ ಬರುವುದಿಲ್ಲ ಎಂದರೆ ಸರಿ. ಕನ್ನಡ ಎಲ್ಲಾ ಪದಗಳ ಅರ್ಥ ನನಗೆ ಗೊತ್ತಾಗುವುದಿಲ್ಲ ಎಂದರೆ ಸರಿ. ನಮಗೆ ತಿಂಗಳ ವೇತನ ಕೊಡುತ್ತಿದ್ದು ಆಗ ರೂ.15,000/- ಸಿಗುತ್ತಿತ್ತು. ಅಂಕುರ್ ಮುರಾ , ಜೋತಿದಾಸ್ , ಲಂಕೇಶ್ ಶರ್ಮಾ, ಬಿಕಾಸ್ ರಾಯ್ , ಮಹೇಶ್ ಷಾ, ಮನೀಸ್ ಸಿಂಗ್ ಗೆ ಎಷ್ಟು ತಿಂಗಳ ವೇತನ ಸಿಗುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಮೇಲೆ ಹೇಳಿದ ವ್ಯಕ್ತಿಗಳೆಲ್ಲಾ ನನಗಿಂತ ಜೂನಿಯರ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನಮಗೆಲ್ಲಾ ಫ್ಯಾಕ್ಟರಿಯ ಕಾಂಪೌಂಡ್ ನಲ್ಲೇ ಇರಲು ಜಾಗ ಕೊಟ್ಟಿದ್ದರು. ಪ್ರತ್ಯೇಕ ರೂಮುಗಳಲ್ಲಿ ನಾವು ವಾಸ ಮಾಡುತ್ತಿದ್ದು ಅಲ್ಲಿ ಸುಮಾರು 8 - 9 ರೂಮುಗಳು ಇದ್ದು , ಆಪರೇಟರ್ ಗಳ ರೂಮುಗಳು ಪ್ರತ್ಯೇಕ ಪ್ರತ್ಯೇಕವಾಗಿ ಇದ್ದು ಹೆಲ್ಪರ್ ಗಳು ಅವರಿಗೆ ಅನುಕೂಲಕ್ಕೆ ತಕ್ಕಂತೆ 3-4 ಜನ ಒಟ್ಟಿಗೆ ಇರುತ್ತಿದ್ದರು. ಸದರಿ ಫ್ಯಾಕ್ಟರಿ ಸುಮಾರು ಒಂದು ಎಕರೆ ವಿಸ್ತೀರ್ಣ ದಷ್ಟು ಇತ್ತು. ಫ್ಯಾಕ್ಟರಿ ಶೆಡ್ ನಿಂದ ಕೆಂಗೇರಿ - ತಾವರೆಕೆರೆ ಮುಖ್ಯ ರಸ್ತೆ ಸುಮಾರು 50 ಮೀಟರ್ ಗಿಂತಲೂ ಒಳಗೆ ಇರುವಷ್ಟು ಅಂತರದಲ್ಲಿ ಇದೆ. ನಮ್ಮ ಫ್ಯಾಕ್ಟರಿಯ ಕಛೇರಿ ವೇಳೆ ಬೆಳಿಗ್ಗೆ 9.00 ರಿಂದ ರಾತ್ರಿ 9.00 ಗಂಟೆ ಆಗಿರುತ್ತದೆ. ನಾವು ಒಂದು ದಿನಕ್ಕೆ 12 ಗಂಟೆ ಕೆಲಸ ಮಾಡುತ್ತೇವೆ. ಕೆಂಗೇರಿ - ತಾವರೆಕೆರೆ ಮುಖ್ಯ ರಸ್ತೆ 40 ಅಡಿ

ಅಗಲ ಇದೆ ಎಂದರೆ ಸಾಕ್ಷಿ ನಾನು ಅಳತೆ ಮಾಡಿಲ್ಲ, ಆದರೆ ಎರಡು ವಾಹನ ಸಂಚಾರ ಮಾಡುವಷ್ಟು ಅಗಲವಿದೆ. ನಮ್ಮ ಫ್ಯಾಕ್ಟರಿ ಒಳಗೆ ಹೋಗಬೇಕಾದರೆ ಗೇಟ್ ದಾಟಿಯೇ ಒಳಗೆ ಹೋಗಬೇಕು ಎಂದರೆ ಸರಿ. ಫ್ಯಾಕ್ಟರಿಯ ಸಮಯವಾದ 9.00 ಗಂಟೆಯ ನಂತರ ಫ್ಯಾಕ್ಟರಿಯ ಗೇಟ್ ತೆರೆದಿರುವುದಿಲ್ಲ ಎಂದರೆ ಸಾಕ್ಷಿ ಕೆಲವೊಮ್ಮೆ ತೆರೆದಿರುತ್ತದೆ ಕೆಲವೊಮ್ಮೆ ಮುಚ್ಚಿರುತ್ತದೆ ಎಂದು ನುಡಿದಿರುತ್ತಾರೆ.

ಕೆಂಗೇರಿ - ತಾವರೆಕೆರೆ ಮುಖ್ಯ ರಸ್ತೆಯಿಂದ 200 - 300 ಅಡಿ ದೂರದಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ಇದೆ ಎಂರದೆ ಸರಿಯಲ್ಲ, ಸಾಕ್ಷಿ ಶಾಲೆ ಇದೆ ಎಂದು ಉತ್ತರಿಸಿರುತ್ತಾರೆ. ಆಗ ಕೋವಿಡ್ ಸಮಯವಾಗಿತ್ತು ಎಂದರೆ ಸಾಕ್ಷಿ ಲಾಕ್ ಡೌನ್ ಎಲ್ಲಾ ಮುಗಿದಿತ್ತು ಎಂದು ಉತ್ತರಿಸಿರುತ್ತಾರೆ. ಕೆಂಗೇರಿ - ತಾವರೆಕೆರೆ ರಸ್ತೆಯ ಎರಡೂ ಕಡೆ ಸಾಕಷ್ಟು ಮರ ಗಿಡಗಳು ಇವೆ ಎಂದರೆ ಸಾಕ್ಷಿ ಎಲ್ಲಾ ಕಡೆ ಆ ರೀತಿ ಇಲ್ಲ ಆದರೆ ಫ್ಯಾಕ್ಟರಿಯ ಕಡೆ ಇದೆ ಎಂದು ಉತ್ತರಿಸಿರುತ್ತಾರೆ.

10. ಘಟನೆ ನಡೆದ ಸಮಯ ರಾತ್ರಿ 10.30 ಕತ್ತಲೆ ಇತ್ತು ಎಂದರೆ ಸರಿಯಲ್ಲ. ಆ ರಸ್ತೆಯಲ್ಲಿ ಯಾವುದೇ ಬೀದಿ ದೀಪಗಳು ಇರಲಿಲ್ಲ ಎಂದರೆ ಸರಿಯಲ್ಲ. ರಸ್ತೆಯಲ್ಲಿ ಇದ್ದಂತಹ ಬೀದಿ ದೀಪದ ಕಂಬ ಸಿಮೆಂಟ್ ಕಂಬವಾಗಿತ್ತು. ಅದರಲ್ಲಿ ಮರ್ಕ್ಯೂರಿ ಲೈಟ್ ಇತ್ತೋ ಟ್ಯೂಬ್ ಲೈಟ್ ಇತ್ತೋ ನನಗೆ ಗೊತ್ತಿಲ್ಲ. ಫ್ಯಾಕ್ಟರಿಯ ರಸ್ತೆ ಪ್ರಾರಂಭವಾಗುವಲ್ಲೇ ವಿದ್ಯುತ್ ದೀಪದ ಕಂಬ ಇತ್ತು. ನಿನ್ನೆ ನಾನು ನ್ಯಾಯಾಲಯಕ್ಕೆ ಬಂದಿದ್ದೆ ಎಂದರೆ ಸರಿ.

11. ನಿನ್ನೆ ನಾನು ನ್ಯಾಯಾಲಯಕ್ಕೆ ಬಂದಾಗ ಪೂರಾ ದಿನ ಒಬ್ಬ ಪೊಲೀಸರು ನನ್ನ ಜೊತೆ ಇದ್ದರು ಎಂದರೆ ಸರಿಯಲ್ಲ. ಇಂದೂ ಸಹ ಅದೇ ಪೋಲೀಸರು ನನ್ನ ಜೊತೆ ಇದ್ದಾರೆ ಎಂದರೆ ಸರಿಯಲ್ಲ. ನಿನ್ನೆ ಸಂಜೆ ನಾನು ಪೋಲೀಸರ ಜೊತೆ ಹೋಗಿರುತ್ತೇನೆ ಎಂದರೆ ಸರಿ. ಪೊಲೀಸರೇ ಈ ದಿನ ನನಗೆ ರೂಂ ಮಾಡಿಕೊಟ್ಟು ಊಟ ಕೊಟ್ಟು ಇಂದು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ನಿನ್ನೆ ನನ್ನ ಜೊತೆಗೆ ಇದ್ದಂತಹ ನ್ಯಾಯಾಲಯದಲ್ಲಿ ಇದೇ ರೀತಿ ಸಾಕ್ಷಿ ಕೊಡಬೇಕು ಎಂದು ಹೇಳಿದ್ದ ಕಾರಣ ನಾನು ಅದೇ ರೀತಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಫ್ಯಾಕ್ಟರಿಯಲ್ಲಿ ಒರಿಸ್ಸಾದವರು, ಬಿಹಾರಿಗಳು ಜಾಸ್ತಿ ಜನ ಇರುವ ಕಾರಣ ಅವರಿಗೆ

ಅಮಲು ಪದಾರ್ಥ ತೆಗೆದುಕೊಳ್ಳುವ ಮದ್ಯಪಾನ ಮಾಡುವ ಅಭ್ಯಾಸ ಇದೆ ಎಂದರೆ ಸಾಕ್ಷಿ ಹಾಗೇನೂ ಇಲ್ಲ ಪಾನ್ ಪರಾಕ್ ಕೆಲವರು ತೆಗೆದುಕೊಳ್ಳುತ್ತಾರೆ ಹಾಗೂ ಕೆಲವರು ಕೆಲವೊಮ್ಮೆ 2 – 3 ತಿಂಗಳಿಗೊಮ್ಮೆ ಮದ್ಯಪಾನ ಮಾಡುತ್ತಾರೆ. ಮಹಮದ್ ತೋಸಿಫ್ ಎಂಬ ತಾವರೆಕೆಗೆ ಪೊಲೀಸರು ನಿನ್ನೆ ನನ್ನ ಜೊತೆಯೇ ಇದ್ದರು ಎಂದರೆ ಸಾಕ್ಷಿ ನನಗೆ ನಿನ್ನೆ ನ್ಯಾಯಾಲಯದ ಗೇಟ್ ಬಳಿ ಅವರು ಸಿಕ್ಕಿದ್ದು ಈ ದಿನ ನ್ಯಾಯಾಲಯದಲ್ಲಿ ನೋಡಿದೆ ಎಂದು ಉತ್ತರಿಸಿರುತ್ತಾರೆ. ಬಿಹಾರಿನಿಂದ ಬಂದಂತಹ ವ್ಯಕ್ತಿಗಳು ಇಲ್ಲಿ ಪ್ಯಾಕ್ಟರಿಯಲ್ಲಿ ಕೆಲಸ ಮಾಡುವಂತಹ ಬಿಹಾರಿಗಳಿಗೆ ಮತ್ತು ಒರಿಸ್ಸಾದ ವ್ಯಕ್ತಿಗಳಿಗೆ ಮತ್ತು ಬೇರೆ ಬೇರೆ ಪ್ಯಾಕ್ಟರಿಯ ಕೆಲಸಗಾರರಿಗೆ ಗಾಂಜಾ ತಂದು ಮಾರಾಟ ಮಾಡಿ ಆ ಬಗ್ಗೆ ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ದೂರು ಕೂಡಾ ದಾಖಲಾಗಿದೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಉತ್ತರಿಸಿರುತ್ತಾರೆ.

12. ಗಾಂಜಾ ಸೇವನೆಯಿಂದಾಗಿ ಫ್ಯಾಕ್ಟರಿಯ ಕೆಲಸಗಾರರು ಕೂಗಾಡಿ ಗಲಾಟೆ ಮಾಡುತ್ತಿದ್ದ ಕಾರಣ, ಫ್ಯಾಕ್ಟರಿಯ ಮಾಲೀಕರಾದ ಕೃಷ್ಣ ಅವರು ಅಲ್ಲಿನ ಕೆಲಸಗಾರರಿಗೆ ಎಚ್ಚರಿಕೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ, ನನ್ನ 7 ವರ್ಷ ಸೇವಾ ಅವದಿಯಲ್ಲಿ ಆ ಥರಹ ಎಂದೂ ನಡೆದಿಲ್ಲ, ನಮಗ್ಯಾರಿಗೂ ಎಚ್ಚರಿಕೆ ಕೊಟ್ಟಿಲ್ಲ ಎಂದು ಉತ್ತರಿಸಿರುತ್ತಾರೆ.

13. ದಿಃ12.09.2021 ಭಾನುವಾರವಾಗಿರುತ್ತದೆ ಎಂದರೆ ಸರಿ. ಅಂದು ಫ್ಯಾಕ್ಟರಿಯಲ್ಲಿ ಯಾವುದೇ ಕೆಲಸ ನಡೆದಿಲ್ಲ, ಎಲ್ಲರಿಗೂ ರಜೆ ಇತ್ತು ಎಂದರೆ ಸರಿಯಲ್ಲ. ಆರೋಪಿ ಮತ್ತು ಆರೋಪಿಗಳ ಕುಟುಂಬದವರು ಅಂದು ಪ್ರವಾಸಕ್ಕೆ ಹೋಗಿದ್ದು ಸಾವನದುರ್ಗ, ಮಂಚನಬೆಲೆ ಜಲಾಶಯ, ದೊಡ್ಡ ಆಲದ ಮರ ಇವುಗಳನ್ನೆಲ್ಲಾ ವೀಕ್ಷಿಸಿ ವಾಪಸ್ಸು ಬಂದು ಅವರ ಮನೆಯ ಸದಸ್ಯರ ಆಟೋದಲ್ಲಿ ಮನೆಗೆ ಹೋಗಿದ್ದು ಆರೋಪಿಗಳು ದ್ವಿಚಕ್ರ ವಾಹನದಲ್ಲಿ ಬಂದಾಗ ಅವರ ವಾಹನ ಕೆಟ್ಟುಹೋಯಿತು ಎಂದು ನನಗೆ ತಿಳಿದಿದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವಯಂ ಹೇಳುತ್ತಾರೆ, ಅವರ ವಾಹನ ಕೆಟ್ಟು ಹೋಗಿದ್ದರೆ ಘಟನೆಯ ನಂತರ ಅವರು ಅದೇ ವಾಹನದಲ್ಲಿ ಹೇಗೆ ಹೋದರು.

14. ಆರೋಪಿಗಳ ದ್ವಿಚಕ್ರ ವಾಹನ ಕೆಟ್ಟು ಅವರಿಗೆ ದಾರಿ ತಪ್ಪಿದ್ದ ಕಾರಣ, ಅಲ್ಲಿಯೇ ಇದ್ದಂತಹ ಅಂಕುರ್ ಮುರಾ ಮತ್ತು ಮನೀಶ್ ಸಿಂಗ್ ಬಳಿ ಅಡ್ರೆಸ್

ಅನ್ನು ತೋರಿಸಿ ಇಲ್ಲಿಗೆ ಹೋಗುವ ದಾರಿ ಯಾವುದು ಎಂದು ತಮಿಳಿನಲ್ಲಿ ಕೇಳುತ್ತಿದ್ದಾಗ ಅಂಕುರ್ ಮುರಾ ಮತ್ತು ಮನೀಶ್ ಸಿಂಗ್ ಹಿಂದಿಯಲ್ಲಿ ಮಾತನಾಡುತ್ತಿದ್ದು, ಅವರವರ ನಡುವೆ ವಾಗ್ದಾನ ಬೆಳೆದಿದ್ದು, ಆ ಸಂದರ್ಭದಲ್ಲಿ ಫ್ಯಾಕ್ಟರಿಯ ಇತರೆ ಕೆಲಸಗಾರರು ಸ್ಥಳಕ್ಕೆ ಬಂದಾಗ ಒಬ್ಬರಿಗೊಬ್ಬರು ಕೈ ಕೈ ಮಿಲಾಯಿಸಿದಾಗ ಅಮಲಿನ ಮತ್ತಿನಲ್ಲಿರುವಂತಹ ಅಂಕುರ್ ಮುರಾ ಮತ್ತು ಮನೀಶ್ ಸಿಂಗ್ ಅವರುಗಳೇ ಜಗಳ ಮಾಡಿಕೊಂಡು ಏಟು ಮಾಡಿಕೊಂಡಿದ್ದು, ಅದನ್ನು ಆರೋಪಿಗಳ ವಿರುದ್ದ ಸುಳ್ಳಾಗಿ ಆರೋಪಿಸಲಾಗಿದೆ ಎಂದರೆ ಸರಿಯಲ್ಲ.

15. ಆರೋಪಿಗಳು ತಮಿಳಿನಲ್ಲಿ ಮಾತನಾಡುತ್ತಿದ್ದು, ನಾವುಗಳು ಹಿಂದಿಯಲ್ಲಿ ಮಾತನಾಡುತ್ತಿದ್ದು, ಆರೋಪಿಗಳನ್ನು ಮತ್ತು ಆರೋಪಿಗಳ ತಾಯಂದಿರನ್ನು ಕೆಟ್ಟ ಮಾತುಗಳಿಂದ ಬೈದಿದ್ದು, ಅದೇ ವಿಚಾರಕ್ಕೆ ಬಾಯಿ ಮಾತಿನ ಜಗಳ ಜೋರು ಜೋರಾಗಿ ನಡೆದಿದ್ದು ಆ ಸಮಯ ನಮ್ಮ ಕಡೆಯ ಫ್ಯಾಕ್ಟರಿಯ ಇತರೆ ನೌಕರರು ಮಚ್ಚು, ಚೂರಿ ತೆಗೆದುಕೊಂಡು ಬಂದು ಜಗಳ ಮಾಡುತ್ತಿದ್ದಾಗ, ಗಾಂಜಾ ಅಮಲಿನಲ್ಲಿದ್ದ ಅಂಕುರ್ ಮುರಾ ಮತ್ತು ಮನೀಶ್ ಸಿಂಗ್ ಗೆ ಸದರಿ ಮಚ್ಚು ತಗುಲಿ ಗಾಯವಾಗಿರುತ್ತದ ಎಂದರೆ ಸರಿಯಲ್ಲ.

16. ಜಗಳ ನಡೆದಾಗ ಫ್ಯಾಕ್ಟರಿಯ ಮ್ಯಾನೇಜ್ ಮೆಂಟ್ ನವರು ನಮ್ಮನ್ನು ಮತ್ತು ಆರೋಪಿಗಳನ್ನು ಸಂತೈಸಿ ನಿಮಗಾದಂತಹ ಗಾಯಗಳಿಗೆ ನೀವೇ ಚಿಕಿತ್ಸೆ ಪಡೆದುಕೊಳ್ಳಿ ನಮ್ಮ ಹುಡುಗರಿಗೆ ಆದಂತಹ ಗಾಯಗಳಿಗೆ ನಾವು ಆಸ್ಪತ್ರೆ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿ ಅಲ್ಲಿಂದ ನಮ್ಮ ಜಾಗ ಖಾಲಿ ಮಾಡಿಸಿ ನಾವುಗಳು ನಮ್ಮ ರೂಮಿಗೆ ಬಂದಿದ್ದು, ನಂತರ ನಮ್ಮವರೇ ಹೊಡೆದು ಏಟು ಆಗಿದ್ದ ಮನೀಶ್ ಸಿಂಗ್ ನ ಗಾಯದಿಂದ ಭಾರೀ ರಕ್ತಸ್ರಾವವಾಗಿದ್ದ ಕಾರಣ ಮಧ್ಯರಾತ್ರಿ 12.30 ರ ಸಮಯದಲ್ಲಿ ಆತ ಮರಣ ಹೊಂದಿದ ಎಂದು ಗೊತ್ತಾಯಿತು ಎಂದರೆ ಸರಿಯಲ್ಲ.

17. ನಮ್ಮ ಫ್ಯಾಕ್ಟರಿಯ ಮಾಲೀಕರು ತುಂಬಾ ಪ್ರಭಾವಿ ವ್ಯಕ್ತಿಯಾಗಿರುವ ಕಾರಣ ಪರಿಹಾರ ಪಡೆದುಕೊಳ್ಳುವ ಉದ್ದೇಶದಿಂದ ಅಮಾಯಕರಾದಂತಹ ಆರೋಪಿಗಳ ಮೇಲೆ ಸುಳ್ಳು ದೂರು ದಾಖಲಾಗುವಂತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

18. ದಿಃ27.10.2021 ರಂದು ನನ್ನನ್ನು ಸೆಂಟ್ರಲ್ ಜೈಲಿಗೆ ಕರೆದುಕೊಂಡು ಹೋಗಿರುತ್ತಾರೆ. ಗುರುತು ಹಚ್ಚುವ ಕವಾಯತ್ತಿಗೆ ಬರುವಂತೆ

ಪೊಲೀಸರು ನಮಗೆ ನೋಟೀಸ್ ಕೊಟ್ಟಿದ್ದರು. ಅಂದು ಜೈಲಿಗೆ ಹೋದಾಗ ಪೊಲೀಸರು ಯಾರೂ ನನ್ನ ಜೊತೆ ಬಂದಿರಲಿಲ್ಲ, ಅಲ್ಲಿಯೇ ಪೊಲೀಸರು ಮತ್ತು ತಹಶೀಲ್ದಾರ್ ಇದ್ದರು.

19. ತಾವರೆಕೆರೆ ಪೊಲೀಸರು ನಾವು ಜೈಲಿಗೆ ಹೋಗುವುದಕ್ಕಿಂತ ಪೂರ್ವದಲ್ಲಿ 4 ಜನ ಆರೋಪಿಗಳ ಫೋಟೋಗಳನ್ನು ತೋರಿಸಿ ಇವರು ಒಳಗೆ ಇರುತ್ತಾರೆ ಎಂದು ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಜನರ ಗುಂಪಿನಲ್ಲಿ ಕೂರಿಸಿರುತ್ತಾರೆ ಈ 4 ಜನರನ್ನು ಮಾತ್ರ ನೀವು ಗುರುತಿಸಬೇಕು ಎಂದು ತಾವರೆಕೆರೆ ಪೊಲೀಸರು ನಮಗೆ ತಿಳಿಸಿದ್ದರು ಎಂದರೆ ಸರಿಯಲ್ಲ.

20. ಗುರುತು ಹಚ್ಚುವ ಕವಾಯತ್ತಿಗೆ ನಾನು, ಅಂಕುರ್, ಜ್ಯೋತಿದಾಸ್, ಮಹೇಶ್ ಶಾಹ, ಲಂಕೇಶ್ ಶರ್ಮಾ ಮತ್ತು ವಿಕಾಸ್ ರೈ ಬಂದಿದ್ದೆವು. ಗುರುತು ಹಚ್ಚಲು ನಮ್ಮನ್ನು ಒಬ್ಬೊಬ್ಬರನ್ನೇ ಒಬ್ಬರಾದ ನಂತರ ಒಬ್ಬರನ್ನು ಒಳಗೆ ಬಿಟ್ಟಿದ್ದು ಅಲ್ಲಿ ತಹಶೀಲ್ದಾರ್ ಮತ್ತು ಒಬ್ಬ ಅಥವಾ ಇಬ್ಬರು ಪೊಲೀಸರು ಇದ್ದು, ವ್ಯಕ್ತಿಗಳನ್ನು ಲೈನಿನಲ್ಲಿ ನಿಲ್ಲಿಸಿದ್ದರು. ನನ್ನ ಮುಂದೆ ಒಟ್ಟು ಎಷ್ಟು ಜನರನ್ನು ನಿಲ್ಲಿಸಿದ್ದರು ಎಂದು ನಾನು ಲೆಕ್ಕ ಮಾಡಲಿಲ್ಲ, ಆದರೆ ಉದ್ದಕ್ಕೆ ನಿಲ್ಲಿಸಿದ ಲೈನಿನಲ್ಲಿ ಸುಮಾರು 50-60 ಜನ ಇದ್ದರು. ಲೈನಿನಲ್ಲಿ ನಿಲ್ಲಿಸಿದವರು ಬೇರೆ ಬೇರೆ ಆಕಾರದವರು, ಬೇರೆ ಬೇರೆ ಉದ್ದದವರು ಇದ್ದರು. ಎಲ್ಲರೂ ಒಂದೇ ವಯಸ್ಸಿನವರು ಇದ್ದರೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ, ಆ ಬಗ್ಗೆ ನನಗೆ ಹೇಳಲು ಸಾಧ್ಯವಿಲ್ಲ, ಕೆಲವರು ಗಡ್ಡ ಬಿಟ್ಟಿದ್ದರು ಕೆಲವರು ಗಡ್ಡ ಬಿಟ್ಟಿಲ್ಲ, ಕೆಲವರು ಕೂದಲು ಬಿಟ್ಟವರು ಇದ್ದರು ಹಾಗೆಯೇ ಬೇರೆ ಬೇರೆಯವರು ಇದ್ದರು ಎಂದು ಉತ್ತರಿಸಿರುತ್ತಾರೆ. ಎಲ್ಲರೂ ಒಂದೇ ಬಣ್ಣದವರು ಇದ್ದರೇ ಎಂಬ ಪ್ರಶ್ನೆಗೆ ಸಾಕ್ಷಿ, ಬೇರೆ ಬೇರೆ ಬಣ್ಣದ ಬಟ್ಟೆಯನ್ನು ಧರಿಸಿದ್ದು, ಬೇರೆ ಬೇರೆ ಬಣ್ಣದವರು ಅಂದರೆ ಕೆಲವರು ಬೆಳ್ಳಗೆ, ಕೆಲವರು ಕಪ್ಪು ಇದ್ದರು.

21. ಎರಡು ಸುತ್ತಿನಲ್ಲಿ ಅಂದರೆ ಎರಡು ರೌಂಡ್ ನಲ್ಲಿ ನನಗೆ ಗುರುತು ಹಚ್ಚಲು ಕೊಟ್ಟಿದ್ದರು. ತಾವರೆಕರೆ ಪೊಲೀಸರು ನನಗೆ ಫೋಟೋ ಕೊಟ್ಟು ತೋರಿಸಿದ್ದ ಕಾರಣ ಇಂಥವರೇ ಎಂದು ನನಗೆ ಗೊತ್ತಾಗಿದ್ದು, ಇಲ್ಲದಿದ್ದರೆ ಆರೋಪಿಗಳು ಯಾರು ಎಂದು ನನಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮಿಂದ ಯಾವುದೇ ಮೊಬೈಲ್ ಆಗಲೀ ಹಣವಾಗಲೀ ಕಿತ್ತುಕೊಂಡಿಲ್ಲ ಎಂದರೆ ಸರಿ.

22. ದಿ:13.09.2021 ರಂದು ನಾನು ಪೊಲೀಸರ ಸಮಕ್ಷಮ ಹೇಳಿಕೆಯನ್ನು ಬೆಳಿಗ್ಗೆ 10.30 ರಿಂದ 12.00 ಅಥವಾ 12.30 ರವರೆಗೆ ಕೊಟ್ಟಿರುತ್ತೇನೆ. ನಾನು ಪೊಲೀಸರಿಗೆ ಕೊಟ್ಟಂತಹ ಹೇಳಿಕೆಯಲ್ಲಿ ಆರೋಪಿಗಳ ಚಹರೆಯ ಪರಿಚಯವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನಗೆ ಕನ್ನಡ ನಿರರ್ಗಳವಾಗಿ ಬರುವುದಿಲ್ಲ ಆ ಕಾರಣ, ನನ್ನೊಂದಿಗೆ ಇದ್ದವರು ಕೊಟ್ಟಂತಹ ಪುಟಗಟ್ಟಲೆ ಹೇಳಿಕೆಯ ವಿಚಾರವನ್ನು ನಾನು ಪೊಲೀಸರಿಗೆ ಕನ್ನಡದಲ್ಲಿ ಅನುವಾದ ಮಾಡಿ ಹೇಳಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

23. ಚಿಕ್ಕಣ್ಣನಪಾಳ್ಯದ ಗ್ರಾಮಸ್ಥರು, ನಮ್ಮ ಫ್ಯಾಕ್ಟರಿಯಲ್ಲಿ ಹಾಗೂ ಅಲ್ಲಿ ಇರುವಂತಹ ಶಾಲೆಯಲ್ಲಿ ಮತ್ತು ಅದಕ್ಕಿಂತ ಸ್ವಲ್ಪ ದೂರದಲ್ಲಿರುವಂತಹ ಬಾರ್‌ನಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ ಎಂದರೆ ಸರಿಯಲ್ಲ. ನಮ್ಮ ಫ್ಯಾಕ್ಟರಿಯಿಂದ ಕೆಳಗಡೆ ರಸ್ತೆ ಮೂಲಕ ಹೋದರೆ ದೊಡ್ಡ ಆಲದ ಮರ ಸಿಗುತ್ತದೆ ಎಂದರೆ ಸರಿಯಲ್ಲ. ಅಲ್ಲಿಂದ ಮುಂದಕ್ಕೆ ಹೋದರೆ ಮಂಚನಬೆಲೆ ಜಲಾಶಯ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅಲ್ಲಿಂದ ಮುಂದಕ್ಕೆ ಹೋದರೆ ಒಂದು ರಸ್ತೆ ಸಾವನದುರ್ಗಕ್ಕೆ ಹೋಗುತ್ತದೆ, ಇನ್ನೊಂದು ರಸ್ತೆ ರಾಮನಗರಕ್ಕೆ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಫ್ಯಾಕ್ಟರಿಯಿಂದ ಮೇಲ್ಮಾರ್ಗವಾಗಿ ಹೋದರೆ ತಾವರೆಕೆರೆ ಮುಖ್ಯರಸ್ತೆ ಮತ್ತು ಅಲ್ಲಿಂದ ಮುಂದಕ್ಕೆ ಹೋದರೆ ಮಾಗಡಿ ರಸ್ತೆ, ಅದರ ವಿರುದ್ಧ ದಿಕ್ಕಿಗೆ ಹೋದರೆ ಬೆಂಗಳೂರು ರಸ್ತೆ ಸಿಗುತ್ತದೆ ಎಂದರೆ ಸರಿ.

24. ನನ್ನ ಸಮಕ್ಷಮ ನಿ.ಪಿ.3 ಮಹಜರ್ ಬರೆದಿಲ್ಲ, ಮು.ಮಾ.1 ನ್ನು ಅಮಾನತ್ತುಪಡಿಸಿಕೊಂಡಿಲ್ಲ, ಅದು ಸೃಷ್ಟನೆಯದ್ದಾಗಿರುತ್ತದೆ ಎಂದರೆ ಸರಿಯಲ್ಲ. ಮು.ಮಾ.1 ಕ್ಕೂ ಈ ಘಟನೆಗೂ ಯಾವುದೇ ಸಂಬಂಧವಿಲ್ಲ, ಅದು ನನ್ನ ವೇಸ್ಟ್ ಬಟ್ಟೆ ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ನಮ್ಮ ಫ್ಯಾಕ್ಟರಿಯ ಸಿಸಿ ಕ್ಯಾಮೆರಾದಲ್ಲಿ ರೆಕಾರ್ಡಿಂಗ್ ಆಗಿದ್ದು ಅದನ್ನು ಹಾಜರುಪಡಿಸಿದರೆ ನಮ್ಮ ಮೇಲೆ ಆರೋಪ ಬರುತ್ತದೆ ಎಂದು ಬೇಕೆಂದೇ ಅದನ್ನು ಹಾಜರುಪಡಿಸಿಲ್ಲ ಹಾಗೂ ಸಿಸಿ ಕ್ಯಾಮೆರಾ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಯ ಪಾಟೀ ಸವಾಲು ಮಧ್ಯಾಹ್ನ 3.50 ರಿಂದ ಈಗ ಸಂಜೆ 5.55 ರವರೆಗೆ ನಡೆದಿದ್ದು, ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶವನ್ನು ನೀಡಬೇಕು, ತನಗೆ ಸದರಿ

ಫ್ಯಾಕ್ಟರಿಯ ವಸ್ತುಸ್ಥಿತಿಯನ್ನು ತಿಳಿದು, ಮುಂದುವರಿದ ಪಾಟೀ ಸವಾಲಿಗೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಂಡಿದ್ದು, ಸರ್ಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಒರಿಸ್ಸಾದಿಂದ ಕರೆಸಿದ್ದು, ಆತನು ಇಲ್ಲಿ ಉಳಿದುಕೊಳ್ಳುವ ವ್ಯವಸ್ಥೆಗೆ ತೊಂದರೆಯಾಗಿದ್ದು, ಪಾಟೀ ಸವಾಲಿಗಾಗಿ ಮುಂದೂಡಿದರೆ ಸಾಕ್ಷಿಯು ಆರೋಪಿಯ ವಶವಾಗುವ ಸಾಧ್ಯತೆ ಇದೆ ಎಂದು ನುಡಿದಿದ್ದು, ಈಗ ಸಮಯ ಸಂಜೆ 6.00 ಗಂಟೆಯಾಗಿರುವ ಕಾರಣ ಎರಡೂ ನ್ಯಾಯಾಲಯದ ಇನ್ನೂ ಕೆಲವು ಪ್ರಕರಣಗಳು ಸಾಕ್ಷಿದಾರರ ವಿಚಾರಣೆಗೆ ಮತ್ತು ಆಲಿಸುವಿಕೆಗಾಗಿ ಕಾದಿರಿಸಿಕೊಂಡಿದ್ದು, ಸದರಿ ಪ್ರಕರಣಗಳನ್ನು ಕೂಗಿಸಲು ಇನ್ನೂ ಸಮಯ ಬೇಕಾಗಿರುವ ಕಾರಣ, ಸಾಕ್ಷಿಯು ರಾಮನಗರದಲ್ಲಿ ಉಳಿದುಕೊಳ್ಳಲು ಖರ್ಚನ್ನು ಭರಿಸುವಂತೆ ಆದೇಶಿಸಿ ಮುಂದುವರಿದ ಪಾಟೀ ಸವಾಲಿಗಾಗಿ ನಾಳೆಗೆ ಕಾದಿರಿಸಲಾಯಿತು.

ಈ ಹಂತದಲ್ಲಿ ಆರೋಪಿ ಪರ ವಕೀಲರು ಫ್ಯಾಕ್ಟರಿಗೆ ಪ್ರವೇಶಿಸಲು ಅಲ್ಲಿನ ಅನುಮತಿ ಪಡೆದುಕೊಳ್ಳಬೇಕಾಗಿದೆ, ಅದನ್ನು 1 ದಿನದಲ್ಲಿ ತನಗೆ ಮಾಡಲು ಸಾಧ್ಯವಿಲ್ಲ, ಈಗಾಗಲೇ 6 ಗಂಟೆ ಆಗಿರುವ ಕಾರಣ, ತನಗೆ 1 ವಾರಗಳ ಅವಕಾಶ ಬೇಕು, ಸದರಿ ಅವಕಾಶ ಕೊಡದೇ ಇದ್ದಲ್ಲಿ ತನ್ನ ಮುಂದುವರಿದ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಬಹುದು, ತಾನು ಸಾಕ್ಷಿಯನ್ನು ಕರೆಸಲು ಮುಂದಕ್ಕೆ ಅರ್ಜಿ ಹಾಕುತ್ತೇನೆ ಎಂದು ಹೇಳಿಕೊಂಡಿದ್ದು, ಸಾಕ್ಷಿಯ ವಿಚಾರಣೆ ಇನ್ನೂ ಯಾತಕ್ಕೆ ಪ್ರಾರಂಭಿಸಿಲ್ಲ ಎಂದು ಮಾನ್ಯ ಉಚ್ಚ ನ್ಯಾಯಾಲಯವು Crl.Pet.No.10664/2025 ರಲ್ಲಿ ನ್ಯಾಯಾಲಯಕ್ಕೆ ವಿವರಣೆಯನ್ನು ಕೇಳಿದ್ದು, ಪೊಲೀಸರು ಸಾಕ್ಷಿದಾರರನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇದ್ದಾಗ ನ್ಯಾಯಾಲಯವು ಏನು ಕ್ರಮ ಕೈಗೊಂಡಿದೆ ಎಂದು ವಿವರಣೆಯನ್ನು ಕೇಳಿದ್ದು, ನ್ಯಾಯಾಲಯದ ಆದೇಶದಂತೆ ಸಂಬಂಧಿಸಿದ ಪೊಲೀಸರು ತಮ್ಮ ಸತತ ಪ್ರಯತ್ನದಿಂದಾಗಿ ಸಾಕ್ಷಿದಾರರನ್ನು ಪತ್ತೆಹಚ್ಚಿ ನಿನ್ನೆ ಮತ್ತು ಇಂದು ನ್ಯಾಯಾಲಯದಲ್ಲಿ ಹಾಜರಿಟ್ಟಿದ್ದು, ಮತ್ತೆ ಪುನಃ ಸಾಕ್ಷಿಯ ಮುಂದುವರಿದ ವಿಚಾರಣೆಗಾಗಿ ಇನ್ನೊಂದು ವಾರದ ನಂತರ ಕಾದಿರಿಸಿದರೆ ಸಾಕ್ಷಿಯನ್ನು ಮತ್ತೆ ಕರೆಸಿಕೊಳ್ಳುವುದು ಕಷ್ಟಕರವಾಗಿದ್ದು, ಸಾಕ್ಷಿಯೂ ಕೂಡ ತಾನು ಒರಿಸ್ಸಾದಿಂದ ಬಂದಿದ್ದು ತನಗೆ ಇಲ್ಲಿ ಉಳಿದುಕೊಳ್ಳುವುದೂ ಸಹ ತೊಂದರೆ ಇದೆ ಎಂದು ಹೇಳಿಕೊಂಡಿದ್ದು, ಇಂದೇ ತನ್ನ ವಿಚಾರಣೆಯನ್ನು ಮುಗಿಸಿಕೊಡಿ ಎಂದು ನ್ಯಾಯಾಲಯಕ್ಕೆ ಕೋರಿಕೊಂಡಿದ್ದು, ಆ

ಕಾರಣದಿಂದ ಸಾಕ್ಷಿಗೆ ಇಂದು ನ್ಯಾಯಾಲಯದ ಅವದಿ ಮುಗಿದು ಇನ್ನೂ ಕೆಲವು ಪ್ರಕರಣಗಳಲ್ಲಿ ಆಲಿಸುವುದು ಬಾಕಿ ಇದೆ ಎಂದು ತಿಳಿಸಿ ನಾಳೆಗೆ ಹಾಜರಾಗುವಂತೆ ತಿಳಿಸಿರುವ ಕಾರಣ, ವಕೀಲರು ತನಗೆ ನಾಳೆ ಪಾಟೀ ಸವಾಲು ಮುಂದುವರಿಸಲು ಸಾಧ್ಯವಿಲ್ಲ ಎಂದು ತಿಳಿಸಿರುವ ಕಾರಣ, ಮುಂದುವರಿದ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
C/c 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.